**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

ಪಿಡಬ್ಲೂ– 9

ಹೆಚ್ಚುವರಿ ಸಾಕ್ಷಿ –1

| | | |
|---|---|---|
| ಸಾಕ್ಷಿ ಹೆಸರು | – | ಚೇತನ್ ಕುಮಾರ್ ಬಿ |
| ತಂದೆ ಹೆಸರು | – | ಬಸವಣ್ಣಪ್ಪ |
| ವಯಸ್ಸು | – | 33 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸಃ | – | ಯಲಸಿ ಗ್ರಾಮ , ಸೊರಬ ತಾಲ್ಲೂಕ್ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 24–09–2025.**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ಚಾಸಾ1 ಮತ್ತು 2 ಗೊತ್ತು. ದಯಾನಂದ ಗೊತ್ತು. ದಿನಾಂಕಃ 14–03–2022 ರಂದು ಪೋಲೀಸರು ನನ್ನನ್ನು ಸೊರಬ ಪೋಲೀಸ್ ಠಾಣೆಗೆ ಕರೆಸಿದ್ದರು. ನನ್ನ ಜೊತೆ ದಯಾನಂದ ರವರನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಚಾಸಾ1 ರವರು ಪೋಲೀಸರಿಗೆ ಗಲಾಟೆ ಬಗ್ಗೆ ತಿಳಿಸಿದರು. ಪೋಲೀಸರು ನನಗೆ ಮಹಜರ್ ಗೆ ಸಹಕರಿಸಬೇಕು ಎಂದು ನೋಟೀಸ್ ನ್ನು ಜಾರಿ ಮಾಡಿರುತ್ತಾರೆ. ಸದರಿ ನೋಟೀಸ್ ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ2(ಸಿ)

ಎಂದು ಗುರುತಿಸಲಾಯಿತು. ಚಾಸಾ1 ರವರು ಒಂದು ಶರ್ಟ್ ಮತ್ತು ಟೋಪಿಯನ್ನು ಪೋಲೀಸರಿಗೆ ನೀಡಿದರು. ಚಾಸಾ2 ಲೋಕೇಶ ರವರು ಅವರ ಶರ್ಟ್ ನ್ನು ಪೋಲೀಸರಿಗೆ ನೀಡಿರುತ್ತಾರೆ. ಸದರಿ ಶರ್ಟ್ ಮತ್ತು ಟೋಪಿಗೆ ರಕ್ತ ಕಲೆಯಾಗಿತ್ತು. ಚಾಸಾ1 ಮತ್ತು 2 ರವರು ಗಲಾಟೆಯಾದ ಸಮಯದಲ್ಲಿ ಸದರಿ ಬಟ್ಟೆಗಳನ್ನು ಧರಿಸಿದ್ದೆವು ಎಂದು ಹೇಳಿ ಪೋಲೀಸರಿಗೆ ನೀಡಿರುತ್ತಾರೆ. ಪೋಲೀಸರು ಸದರಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಫೋಟೋಗಳನ್ನು ತೆಗೆದಿರುತ್ತಾರೆ. ಪೋಲೀಸರು ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ಅಮಾನತ್ತು ಪಂಚನಾಮೆ ಮಾಡಿರುತ್ತಾರೆ. ಅಮಾನತ್ತುಪಂಚನಾಮೆ ದಾಖಲೆಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ನನ್ನ ಜೊತೆ ದಯಾನಂದ , ಮಾಲತೇಶ ಮತ್ತು ಲೋಕೇಶ ಸಹಿ ಹಾಕಿರುತ್ತಾರೆ. ಈಗ ತೋರಿಸಿದ ನಿಪಿ –4 ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋ ಆಗಿರುತ್ತದೆ. ಅದರಲ್ಲಿ ನಾನು ಇರುತ್ತೇನೆ. ಚಾಸಾ1 ಮತ್ತು 2 ರವರು ಹಾಜರುಪಡಿಸಿದ ಬಟ್ಟೆಗಳನ್ನು ಮತ್ತು ಟೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ಚಾಸಾ2 ಲೋಕೇಶ ನನ್ನ ಅಕ್ಕನ ಮಗ ಎಂದರೆ ಸರಿ. ದಿನಾಂಕಃ 14-03-2022 ರ 3 ದಿವಸದ ಹಿಂದೆ ಪೋಲೀಸರು ನನಗೆ ಕರೆ ಮಾಡಿ ಪೋಲೀಸ್ ಠಾಣೆಗೆ ಬರಲು ಹೇಳಿದರು. ಪೋಲೀಸ್ ಠಾಣೆಗೆ ನಾನು ಮತ್ತು ದಯಾನಂದ ಹೋಗಿರುತ್ತೇವೆ. ನಿಪಿ 2 ಮತ್ತು 3 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 3 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಪೋಲಿಸೇರು ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಚಾಸಾ2 ರವರು ನನ್ನ ಅಕ್ಕನ ಮಗನಾದ ಕಾರಣ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).